


ಚಿತ್ರಗಳು: ಸೃಜನ್

ಸಂಪ್ರದಾಯ ಅನ್ನುತ್ತಿದ್ದರು. ಖರ್ಚಿಗೆ ಹಣ ಎಲ್ಲ ರೆಡಿ ಮಾಡ್ಕೊಂಡು ಕೂತಿದ್ದಾರೆ. ಹೆರಿಗೆಗೆ ಮಗಳು ಬರೋದಿಲ್ಲವಾ ಅಂತ ಊರವರೆಲ್ಲ ಏನೇನು ಆಡಿಕೊಳ್ಳುತ್ತಾರೆ ನೋಡು...'' ಅಂದರು ಗೌರಿಯಮ್ಮ.

''ಅಪ್ಪನಲ್ಲಿ ಅವರೇ ಮಾತಾಡುತ್ತಾರಂತೆ. ಒಳ್ಳೆಯ ಸೌಕರ್ಯ ಇರುವ ಆಸ್ಪತ್ರೆಗಳ ಸಂಪೂರ್ಣ ಖರ್ಚು ಇನ್ಸುರೆನ್ಸ್ ಕೊಡುತ್ತದೆ ಅಂತ ಹೇಳಿ ಅಪ್ಪನನ್ನು ಒಪ್ಪಿಸುತ್ತೇನೆ ಅನ್ನುತ್ತಿದ್ದರು. ಯಾರೂ ಏನೂ ಹೇಳಲ್ಲ. ಹೇಳಿದ್ರೂ ಅವರ ಬಾಯಲ್ಲಿ ಹೇಳಿಕೊಳ್ಳುತ್ತಾರೆ ಅದಕ್ಕೆಲ್ಲ ತಲೆಬಿಸಿ ಯಾಕೆ? ನೀವಿಬ್ರೂ ಇಲ್ಲೇ ಬನ್ನಿ. ನನಗೂ ಸ್ವಲ್ಪ ನೆಮ್ಮದಿ ಇರುತ್ತೆ, ವಿಮಾನ ಕಾರು ಅಂತ ಓಡಾಟ ತಪ್ಪುತ್ತೆ'' ವಿವರಿಸಿದಳು ಮಗಳು.

''ಏನೋಪ್ಪ... ಅವರು ಮಾತಾಡಿ ನಿರ್ಧಾರಕ್ಕೆ ಬರಲಿ, ಅಲ್ಲಿಯಾದ್ರೇನು ಇಲ್ಲಿಯಾದ್ರೇನು,